**ಎಂಟನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮೈಸೂರು, ಹುಣಸೂರು ಪೀಠ.**

**SC No**.302/2022

**PW**. 2

**CW**. 2

**ಸಾಕ್ಷಿಯ ಹೆಸರು –ಚಂದ್ರ**

**ತಂದೆಯ ಹೆಸರು –ಮಹದೇವಪ್ಪ**

**ವಯಸ್ಸು –46 ವರ್ಷಗಳು** ದಿನಾಂಕ 26–09–2025 ರಂದು ಪ್ರಮಾಣವಚನ ಬೋಧಿಸಲಾಯಿತು.

**ಉದ್ಯೋಗ –ವ್ಯವಸಾಯ**

**ವಾಸಸ್ಥಳ –ಐಲಾಪುರ, ಪಿರಿಯಾಪಟ್ಟಣ ತಾಃ**

**ಮುಖ್ಯ ವಿಚಾರಣೆಃ– ಸರ್ಕಾರಿ ಅಭಿಯೋಜಕರಿಂದಃ–**

ಚಾಸಾ–1, ಚಾಸಾ–3, ಚಾಸಾ–4 ನನ್ನ ಮಾವಂದಿರು. ಚಾಸಾ–5 ನನಗೆ ಪರಿಚಯಸ್ಥರು. ಎಲ್ಲ ಆರೋಪಿತರು ಗೊತ್ತು.

ದಿಃ 11–04–2021 ರಂದು ಬೆಳಗ್ಗೆ 9.30 ಗಂಟೆಗೆ ಚಾಸಾ–1 ರವರು ಚಾಸಾ–3 ರವರ ಮನೆಯ ಮುಂದೆ ಹೋಗುವಾಗ ಎಲ್ಲ ಆರೋಪಿತರು ಬಂದು ಅಡ್ಡ ಹಾಕಿ, 2 ನೇ ಆರೋಪಿ ಮಚ್ಚಿನಿಂದ ಚಾಸಾ–1 ರವರ ತಲೆಗೆ ಹೊಡೆದ. 3 ನೇ ಆರೋಪಿ ದೊಣ್ಣೆಯಿಂದ ಚಾಸಾ–1 ರವರ ಬಲಗೈಗೆ ಹೊಡೆದ. 1 ನೇ ಆರೋಪಿ ದೊಣ್ಣೆಯಿಂದ ಚಾಸಾ–1 ರವರ ಎಡಗೈ ಮತ್ತ ಭುಜಕ್ಕೆ ಹೊಡೆದ. ಎಲ್ಲ ಆರೋಪಿತರು ಚಾಸಾ–1 ರವರಿಗೆ ದೊಣ್ಣೆಯಿಂದ ಹಲ್ಲೆ ಮಾಡಿದರು. ಆಗ ನಾನು ಜಗಳ ಬಿಡಿಸಲು ಬಂದಾಗ, 2 ನೇ ಆರೋಪಿ ನನಗೆ ಮಚ್ಚಿನಿಂದ ಮೂಗಿಗೆ ಹೊಡೆದು ಹಲ್ಲೆ ಮಾಡಿದ. ಆರೋಪಿತರು ನಮ್ಮನ್ನು ಕೊಲೆ ಮಾಡುವ ಉದ್ದೇಶದಿಂದ ಮಚ್ಚು ಮತ್ತು ದೊಣ್ಣೆಯಿಂದ ಹಲ್ಲೆ ಮಾಡಿದ್ದಾರೆ. ನಂತರ ನಾನು ಪಿರಿಯಾಪಟ್ಟಣ ಆಸ್ಪತ್ರೆಗೆ ಹೋಗಿ ಚಿಕಿತ್ಸೆ

ಪಡೆದಿದ್ದೇನೆ. ಚಾಸಾ–1 ರವರ ಬಲಗೈನ ಒಂದು ಮೂಳೆ ಹಾಗೂ ಎಡಗೈನ ಎರಡು ಮೂಳೆ ಮುರಿದಿದ್ದವು. ನಾನು ಆಸ್ಪತ್ರೆಯಲ್ಲಿದ್ದಾಗ ಪೊಲೀಸರು ಬಂದು ನನ್ನ ಹೇಳಿಕೆ ಪಡೆದಿದ್ದಾರೆ. ನಾನು ಕೃತ್ಯದ ಸಮಯದಲ್ಲಿ ಧರಿಸಿದ್ದ ಶರ್ಟ ಹಾಗೂ ಒಂದು ಪ್ಯಾಂಟ್ ರಕ್ತಕಲೆಯಾಗಿದ್ದವು. ನನಗೆ ಮತ್ತು ಚಾಸಾ–1 ರವರಿಗೆ ಹೊಡೆದ ಆರೋಪಿತರನ್ನು ನ್ಯಾಯಾಲಯದಲ್ಲಿ ನೋಡಿ ಗುರುತಿಸುತ್ತೇನೆ. ನನಗೆ ಮತ್ತು ಚಾಸಾ–1 ರವರಿಗೆ ಹೊಡೆದ ಒಂದು ಮಚ್ಚು ಹಾಗೂ ನಾಲ್ಕು ದೊಣ್ಣೆಗಳನ್ನು ಪೊಲೀಸರಿಗೆ ನೀಡಿದ್ದೇನೆ. ಅವುಗಳನ್ನು ಈಗಾಗಲೇ ಮು.ಮಾ–1 ರಿಂದ 5 ಎಂದು ಗುರುತಿಸಲಾಗಿದೆ. ಚಾಸಾ–1 ರವರು ಕೃತ್ಯ ನಡೆದ ಸಮಯದಲ್ಲಿ ಧರಿಸಿದ್ದ ಒಂದು ಶರ್ಟ ಮತ್ತು ಲುಂಗಿಯನ್ನು ನಾನೇ ಪೊಲೀಸರಿಗೆ ನೀಡಿದ್ದು , ಅವುಗಳನ್ನು ಈಗಾಗಲೇ ಮು.ಮಾ–6 ಮತ್ತು 7 ಎಂದು ಗುರುತಿಸಲಾಗಿದೆ. ನಾನು ಕೃತ್ಯದ ಸಮಯದಲ್ಲಿ ಧರಿಸಿದ್ದ ಶರ್ಟ ಹಾಗೂ ಒಂದು ಪ್ಯಾಂಟ್ ಗಳನ್ನು ಪೊಲೀಸರು ಜಪ್ತಿ ಮಾಡಿದ್ದು, ಅವುಗಳನ್ನು ನ್ಯಾಯಾಲಯದಲ್ಲಿ ನೋಡುತ್ತಿದ್ದು, ಮು.ಮಾ–8 ಹಾಗೂ 9 ಎಂದು ಗುರುತಿಸಲಾಯಿತು.

ನಾನು ಸ್ಥಳ ತೋರಿಸಿದ ಮೇರೆಗೆ ಅದೇ ದಿನ ಸಂಜೆ 400 ರಿಂದ 6.00 ಗಂಟೆವರೆಗೆ ಪೊಲೀಸರು ಪಂಚನಾಮೆ ಮಾಡಿ, ನಾನು ಹಾಜರು ಮಾಡಿದ ಮು.ಮಾ–1 ರಿಂದ 9 ಗಳನ್ನು ಜಪ್ತಿ ಮಾಡಿ ನನ್ನ ಸಹಿ ಪಡೆದರು. ಸದರಿ ಪಂಚನಾಮೆಯನ್ನು ಈಗ ನೋಡುತ್ತಿದ್ದು , ಅದನ್ನು ನಿಪಿ–2 ಎಂದು ಸಾಕ್ಷಿಯ ಸಹಿಯನ್ನು ನಿಪಿ–2(ಎ) ಎಂದು ಗುರುತಿಸಲಾಯಿತು. ಆಗ ಚಾಸಾ–7 ಮತ್ತು 8 ರವರು ಸದರಿ ಪಂಚನಾಮೆಗೆ ಸಹಿ ಮಾಡಿದ್ದಾರೆ.

**SC No.302/2022**
**PW.2**

**ಪಾಟೀಸವಾಲುಃ– ಆರೋಪಿತರ ಪರ ಶ್ರೀ ಎಸ್ ಪಿ ವಕೀಲರಿಂದಃ–**

ಆರೋಪಿ ಪರ ವಕೀಲರ ಕೋರಿಕೆಯ ಮೇರೆಗೆ ರೂ. 500/– ವೆಚ್ಚದೊಂದಿಗೆ ಪಾಟೀಸವಾಲನ್ನು ಮುಂದೂಡಲಾಯಿತು.

**ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

ಓ ಹೇ ಕೇ ಸರಿ ಇದೆ ಎಂದು ಒಪ್ಪಿದ ಮೇರೆಗೆ,

ಎಂಟನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮೈಸೂರು, ಹುಣಸೂರು ಪೀಠ.